

**ಅಂತಾರಾಷ್ಟ್ರೀಯ ರಂಗಸಂಸ್ಥೆ**

**(International Theatre Institute)**

**ವಿಶ್ವರಂಗಭೂಮಿ ದಿನಾಚರಣೆ 27 ಮಾರ್ಚ್, 2015**

# ಕ್ರಜಿಸ್ಟೋಫ್ ವಾರ್ಲಿಕೊವಸ್ಕಿ ಅವರ ಸಂದೇಶ

ರಂಗಭೂಮಿಯ ನಿಜವಾದ ಗುರುಗಳನ್ನು ಬಹಳ ಸುಲಭವಾಗಿ ವೇದಿಕೆಯಿಂದ ದೂರದಲ್ಲಿ ಕಾಣಬಹುದು ಮತ್ತು ಇವರಿಗೆ ರಂಗಪದ್ಧತಿಯನ್ನು ನಕಲು ಮಾಡುವ ಅಥವಾ ಹಳಸಲು ನುಡಿಗಳನ್ನು ಉತ್ಪಾದಿಸುವ ಯಂತ್ರದಂತಹ ರಂಗಭೂಮಿಯಲ್ಲಿ ಸಾಮಾನ್ಯವಾಗಿ ಆಸಕ್ತಿ ಇರುವುದಿಲ್ಲ. ರಂಗಮಂದಿರದಿಂದ ಮತ್ತು ಒಂದಲ್ಲ ಒಂದು ಜಗತ್ತನ್ನು ಅನುಕರಣೆ ಮಾಡಲು ಕಾತರಿಸುವ ಅಸಂಖ್ಯಾತ ಜನರನ್ನು ದಾಟಿ ಮಿಡಿಯುವ ಮೂಲವನ್ನು, ಜೀವಂತ ತರಂಗಗಳನ್ನು ಅವರು ಹುಡುಕಿ ತೆಗೆಯುತ್ತಾರೆ. ನಾವು ಪ್ರೇಕ್ಷಕರ ಜೊತೆ, ಚರ್ಚೆಗೆ ಕೇಂದ್ರಿಕೃತವಾದ ಅಥವಾ ಅವಲಂಬಿಸಿರುವ ಜಗತ್ತನ್ನು ಸೃಷ್ಟಿಸುವ ಬದಲು ನಕಲು ಮಾಡುತ್ತೇವೆ. ಬಾಹ್ಯ ರೂಪದ ಕೆಳಗೆ, ವಾಸ್ತವಾಗಿ ತುಂಬಿರುವ ಭಾವೋದ್ರೇಕಗಳನ್ನು ಬಹಿರಂಗಗೊಳಿಸಲು ರಂಗಭೂಮಿ ಬಿಟ್ಟು ಬೇರೊಂದಿಲ್ಲ.

ಅನೇಕ ಬಾರಿ ಮಾರ್ಗದರ್ಶನಕ್ಕಾಗಿ ನಾನು ಗದ್ಯದ ಮೊರೆ ಹೋಗಿದ್ದೇನೆ. ನೂರು ವರ್ಷಗಳ ಹಿಂದೆಯೆ ಯೂರೋಪಿನ ದೇವತೆಗಳ ಅವನತಿಯನ್ನು ಸಂಯಮವಾಗಿ ಮತ್ತು ಭವಿಷ್ಯಸೂಚಕವಾಗಿ ವರ್ಣಿಸಿದ ಆ ಲೇಖಕರ ಬಗ್ಗೆ, ಪ್ರಕಾಶಿಸಬೇಕಾಗಿದ್ದ ನಾಗರೀಕತೆಯನ್ನು ಅಂಧಕಾರಕ್ಕೆ ಮುಳುಗಿಸಿದ ಆ ಸಂಧ್ಯಾಕಾಲದ ಬಗ್ಗೆಯು ನಾನು ದಿನವಿಡೀ ಯೋಚಿಸುತ್ತೇನೆ. ಫ್ರೆಂಜ್‌ಕಾಫ್ಕ, ಥಾಮಸ್‌ಮಾನ್, ಮಾರ್ಷಲ್ ಪ್ರಾಷ್ಟ್ ಬಗ್ಗೆಯೂ ಯೋಚಿಸಿದ್ದೇನೆ. ಇಂದು ಜಾನ್ ಮ್ಯಾಕ್ಸ್‌ವೆಲ್ ಕೋಯಟ್ಟಿಯನ್ನು ಪ್ರವಾದಿಗಳಲ್ಲಿ ಒಬ್ಬರಾಗಿ ನಾನು ಎಣಿಸುತ್ತೇನೆ.

ಅನಿವಾರ್ಯದ ಜಗತ್ತಿನಲ್ಲಿ ಅಂತ್ಯ ಈ ಗ್ರಹದ ಅಂತ್ಯವಲ್ಲ – ಬದಲಾಗಿ ಮಾನವ ಸಂಬಂಧಗಳ ಪ್ರತಿರೂಪದ ಅಂತ್ಯ. ಸಾಮಾಜಿಕ ವ್ಯವಸ್ಥೆ ಮತ್ತು ವಿಧಾನದ ಅಂತ್ಯ – ಅವರ ತೀಕ್ಷಣವಾದ ಸಾಮಾನ್ಯ ಜ್ಞಾನ ಇಂದಿಗೆ ಮತ್ತು ಈಗ ಪ್ರಚಲಿತ, ಸರ್ವವ್ಯಾಪಿಯಾಗಿರುವ ಮಾಧ್ಯಮಕ್ಕೂ ಮೀರಿ ವೇಗವಾಗಿ, ಹೊಸ ಜಾಗಗಳಲ್ಲಿ ಉರಿಯುತ್ತಿರುವ ಮತ್ತು ಸಂಘರ್ಷಗಳ ಅಭಿಮುಖವಾದ ಇಂತಹ ಜಗತ್ತಿನ ನಂತರಲ್ಲಿ ಬದುಕಿರುವ ನಮಗೆ ಈ ಬೆಂಕಿಯು ಬಹುಬೇಗ ಮುಂದೆಂದು ಹಿಂತಿರುಗದಂತೆ ನೀರಸವಾಗಿ ಬೆಳೆದು ಕಣ್ಮರೆಯಾಗುತ್ತದೆ ಮತ್ತು ಇದರಿಂದ ನಾವು ನಿಸ್ಸಾಹಯಕರಾಗಿ, ಭಯಭೀತರಾಗಿ ದಿಕ್ಕುತೋಚದಂತಾಗುತ್ತೇವೆ. ಗೋಪುರಗಳನ್ನು ಕಟ್ಟಲಾಗದ ನಾವು ಹಠದಿಂದ ಕಟ್ಟಿದ ಗೋಡೆಗಳು ನಮ್ಮನ್ನು ಯಾವುದರಿಂದಲು ರಕ್ಷಿಸಲಾರವು – ಬದಲಾಗಿ ಅವುಗಳೇ ನಮ್ಮ ರಕ್ಷಣೆ ಪಾಲನೆ ಬೇಡುತ್ತವೆ. ಅದಕ್ಕಾಗಿ ನಮ್ಮ ಶಕ್ತಿಯ ಬಹುಭಾಗವನ್ನು ನುಂಗಿ ಹಾಕುತ್ತದೆ. ದ್ವಾರದ ಆಚೆಗೋಡೆಯ ಹಿಂಬಾಗದಲ್ಲಿ ಏನಿದೆ ಎಂದು ನೋಡಲು ನಮ್ಮಲ್ಲಿ ಚೈತನ್ಯವಿರದು. ಇದೇ ಕಾರಣಕ್ಕಾಗಿ ರಂಗಭೂಮಿ ಇರಬೇಕು ಮತ್ತು ಚೈತನ್ಯ ಪಡೆಯಬೇಕು. ನಿಷೇದವಿರುವಲ್ಲಿ ಇಣುಕಿನೋಡಬೇಕು.

'ವಿವರಿಸಲಾಗದ್ದನ್ನು ದಂತಕಥೆ ವಿವರಿಸಲು ಪ್ರಯತ್ನಿಸುತ್ತದೆ. ಅದು ಸತ್ಯದ ನೆಲಗಟ್ಟಲ್ಲಿರುತ್ತದೆ. ಅದು ಅಸ್ಪಷ್ಟತೆಯಲ್ಲಿ ಕೊನೆಗೊಳ್ಳಬೇಕು' – ಹೀಗೆ ಪ್ರಮೆಥ್ಯೂಸ್ ದಂತಕತೆಯ ರೂಪಾಂತರವನ್ನು ಕಾಫ್ಕಾ ವಿವರಿಸಿದ್ದು. ಸತ್ಯದ ನೆಲಗಟ್ಟಲ್ಲಿರುವ ಆ ಬಗೆಯ ರಂಗಭೂಮಿಯನ್ನು ಎಲ್ಲ ರಂಗಕರ್ಮಿಗಳಿಗಾಗಿ ಪ್ರೇಕ್ಷಕರಿಗಾಗಿ ನಾನು ಹೃದಯ ತುಂಬಿ ಬಯಸುತ್ತೇನೆ.

————————

**ಕ್ರಜಿಸ್ಟೋಫ್ ವಾರ್ಲಿಕೋವಸ್ಕಿ ಕಿರುಪರಿಚಯ:** ಪೋಲೀಷ್ ರಂಗನಿರ್ದೇಶಕ, ಕಲಾ ನಿರ್ದೇಶಕ, ವಾರ್ಸಾದ ನ್ಯೂಥಿಯೇಟರ್ ನಿರ್ದೇಶಕರಾದ ಕ್ರೆಜಿಸ್ಟೋಫ್ ವಾರ್ಲಿಸ್ಕಾವಸ್ಕಿ ಹುಟ್ಟಿದ್ದು ಮೇ 26, 1962. ಇತಿಹಾಸ, ತತ್ವಶಾಸ್ತ್ರ, ರೋಮನ್, ಫ್ರೆಂಚ್ ಭಾಷೆಗಳನ್ನು ಅಧ್ಯಯನ ಮಾಡಿ 1993ರಲ್ಲಿ ನಾಟಕಶಾಸ್ತ್ರದಲ್ಲಿ ಪದವಿ ಪಡೆದರು. ಪೀಟರ್‌ಬ್ರೂಕ್, ಇಂಗ್‌ಮರ್ ಬರ್ಗಮನ್, ಗ್ಲೋರ್ಗಿಯೋ ಸ್ಟ್ರೆಹ್ಲರ್ ಮುಂತಾದ ರಂಗದಿಗ್ಗಜಗಳೊಂದಿಗೆ ಕೆಲಸಮಾಡಿ ವೋಲ್ಡ್ ಥಿಯೇಟರ್, ವೆರೈಟಿ ಥಿಯೇಟರ್‌ಗಳಲ್ಲಿ ಕೆಲಸ ನಿರ್ವಹಿಸಿ ಶೇಕ್ಸ್‌ಪಿಯರ್‌ನ ಅನೇಕ ನಾಟಕಗಳನ್ನು ಸ್ಪರ್ಧೆಗೆ ತೆಗೆದುಕೊಂಡು ಹೋಗಿ ಅನೇಕ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಚಿತ್ರ ಕಲಾವಿದೆ, ವಸ್ತ್ರವಿನ್ಯಾಸಕಿಯಾದ ಮಾಲ್ಕರ್ಜಟಿಸಿಜಿ ಅವರನ್ನು ವಿವಾಹವಾಗಿದ್ದಾರೆ.

————————

* ಕನ್ನಡಕ್ಕೆ: **ಶ್ರೀಕಂಠ ಗುಂಡಪ್ಪ**
ಹಿರಿಯ ರಂಗಕರ್ಮಿ

**(ಮನವಿ: ಮಾರ್ಚ್ 27ರ ವಿಶ್ವ ರಂಗಭೂಮಿ ದಿನಾಚರಣೆಯ ಸಂದರ್ಭದಲ್ಲಿ ಆರಂಭದಲ್ಲೆ ಈ ಸಂದೇಶವನ್ನು ಓದುವುದು ಅಪೇಕ್ಷಣೀಯ)**

ನಂ. 57, 'ಈಶಾನ್ಯ' 3ನೇ ಮೇನ್, 3ನೇ ಕ್ರಾಸ್, ಬ್ಯಾಂಕ್ ಕಾಲೋನಿ, ಬೋಗಾದಿ, ಮೈಸೂರು - 570 0026
e-mail: sreekanta.gundappa@gmail.com, Ph.: 0821–2598801, ಮೊ: 9986006625